ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 231(1868)

ಸದಸ್ಯರ ಹೆಸರು : ಡಾ.ಕೆ ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 15/03/2022

ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
1	ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಂಗ್ರಹವಾದ ಆಸ್ತಿ ತೆರಿಗೆ ಪ್ರಮಾಣ ಎಷ್ಟು; (ವರ್ಷವಾರು, ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರನಿಗಮಗಳ 1976ರ ಕಾಯ್ದೆಯಡಿ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆಯನ್ನು ನಿರ್ಧರಿಸಿ, ವಿಧಿಸುತ್ತಿದ್ದು ಸಂಗ್ರಹಿಸಲಾಗುವ ಆಸ್ತಿ ತೆರಿಗೆಯನ್ನು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ನಿಧಿಗೆ ಜಮೆ ಮಾಡಿಕೊಂಡು, ವಾರ್ಷಿಕ ಅಯವ್ಯಯದಲ್ಲಿ ಕೌನ್ಸಿಲ್‌ನಲ್ಲಿ ಮಂಡಿಸಿ, ವಿವಿಧ ಖರ್ಚು-ವೆಚ್ಚಗಳಿಗೆ, ತಮ್ಮ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಒದಗಿಸಲು/ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಟ್ಟು, ನಿಯಮಾನುಸಾರ ಬಳಕೆ ಮಾಡಿಕೊಳ್ಳಲಾಗುತ್ತಿದೆ.
2	ಆಸ್ತಿ ತೆರಿಗೆ ನಿಗದಿಪಡಿಸುವ ಕುರಿತಾಗಿ ಸರ್ಕಾರವು ಅಳವಡಿಸಿಕೊಂಡಿರುವ ಮಾನದಂಡಗಳೇನು: ಪ್ರಸ್ತುತ ಅನುಸರಿಸಲಾಗುತ್ತಿರುವ ನಿಯಮಗಳ ಕೋಷ್ಟಕದ ಮಾಹಿತಿ ಒದಗಿಸುವುದು:	ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಕಲಂ 101 ಮತ್ತು 102 ಹಾಗೂ ಕರ್ನಾಟಕ ಪೌರನಿಗಮಗಳ ಅಧಿನಿಯಮ 1976ರ ಕಲಂ 108 ಮತ್ತು 109ರಡಿ ಆಸ್ತಿ ತೆರಿಗೆ ನಿರ್ಧರಣೆಗೆ ಮಾನದಂಡಗಳನ್ನು ವಿವರಿಸಲಾಗಿದ್ದು ಸದರಿ ಮಾನದಂಡಗಳನ್ವಯ ನಗರ ಸ್ಥಳೀಯ ಸಂಸ್ಥೆಗಳಿಂದ ಆಸ್ತಿ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಆಸ್ತಿ ತೆರಿಗೆಯ ದರಗಳು

ಕ್ರಸಂ	ಆಸ್ತಿಯ ವರ್ಗ	ಆಸ್ತಿ ತೆರಿಗೆದರ	
		ಕನಿಷ್ಠ	ಗರಿಷ್ಠ
1	ವಾಣಿಜ್ಯ ಕಟ್ಟಡಗಳು	0.5%	3%
2	ವಸತಿ ಮತ್ತು ವಾಣಿಜ್ಯಯೇತರ	0.2%	1.5%
3	ಖಾಲಿ ನಿವೇಶನಗಳು	0.2%	0.5%
4	ಕೈಗಾರಿಕೆಗಳು	ವಾಣಿಜ್ಯ ಕಟ್ಟಡಗಳಿಗೆ ನಿಗಧಿಪಡಿಸುವ ಆಸ್ತಿ ತೆರಿಗೆದರದ ಶೇ.70ರಷ್ಟಕ್ಕೆ ಕಡಿಮೆಯಿಲ್ಲದಂತೆ ನಿಗಧಿಪಡಿಸುವುದು.	

		ಆಸ್ತಿ ತೆರಿಗೆಗೆ ಗುರಿಯಾಗತಕ್ಕ ಸ್ವತ್ತಿನ ಮೂಲ ಮೌಲ್ಯವನ್ನುಕರ್ನಾಟಕ ಸ್ಟಾಂಪ್‌ಅಧಿನಿಯಮ 1957ರ ಕಲಂ 45 ಬಿ ರಡಿ ಪ್ರಕಟಿಸಲಾಗುವ ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗಳ ಶೇ 25ರಷ್ಟನ್ನು ಪರಿಗಣಿಸಿ ಆಸ್ತಿ ತೆರಿಗೆಯನ್ನು ನಿರ್ಧರಿಸಲಾಗುವುದು.
3	ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ತೆರಿಗೆ ಸಂಗ್ರಹವಾಗುತ್ತಿದ್ದರೂ ಸರ್ಕಾರದ ಬೊಕ್ಕಸಕ್ಕೆ ತಲುಪುತ್ತಿರುವುದು ಕಡಿಮೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: ಈ ನಿಟ್ಟಿನಲ್ಲಿ ಕಂಡುಬಂದ ನ್ಯೂನತೆಗಳು ಏನು: ಆಗಿರಬಹುದಾದ ನಷ್ಟದ ಅಂದಾಜು ಸರ್ಕಾರದ ಗಮನಕ್ಕೆ ಬಂದಿದೆಯೇ, (ಬಂದಿದ್ದಲ್ಲಿ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹವಾಗುವ ಆಸ್ತಿ ತೆರಿಗೆಯನ್ನು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ನಿಧಿಗೆ ಜಮಾ ಮಾಡಿಕೊಂಡು, ಕೌನ್ಸಿಲ್ ನಿರ್ಣಯದಂತೆ ವೆಚ್ಚ ಮಾಡಲು ಅಧಿಕಾರ ಹೊಂದಿರುತ್ತವೆ. ಸರ್ಕಾರದ ಬೊಕ್ಕಸಕ್ಕೆ ಆಸ್ತಿ ತೆರಿಗೆಯನ್ನು ಪಾವತಿಸಲಾಗುವುದಿಲ್ಲ. ಆಸ್ತಿ ತೆರಿಗೆ ವಸೂಲಾತಿಯಲ್ಲಿ ಶೇ. 100ರಷ್ಟು ಪ್ರಗತಿ ಸಾಧಿಸಲು ನಗರ ಸ್ಥಳೀಯ ಸಂಸ್ಥೆಗಳಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಕಾಲ ಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿಯ ಕೊರತೆ ಇದ್ದರೂ, ಕಳೆದ 2 ವರ್ಷಗಳಲ್ಲಿ ಕೋವಿಡ್ ಪರಿಣಾಮವಿದ್ದರೂ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ವಸೂಲಾತಿಯಲ್ಲಿ ಪ್ರಗತಿ ಸಾಧಿಸಿರುವುದು ಕಂಡುಬಂದಿರುತ್ತದೆ.
4	ಪ್ರತಿ ಸ್ಥಿರಾಸ್ತಿಗೂ ಗುರುತಿನ ಸಂಖ್ಯೆ:(PID Property ID) ನೀಡುವಲ್ಲಿ ಮತ್ತು PID ಸಂಖ್ಯೆ ಮೂಲಕವೇ ಆಸ್ತಿ ತೆರಿಗೆ ಪಾವತಿಸಿಕೊಳ್ಳುವ ನಿಟ್ಟಿನಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಕುರಿತಾಗಿ ಕಂಡುಕೊಂಡ ನ್ಯೂನತೆಗಳು/ಸಮಸ್ಯೆಗಳು ಏನು: ಈ ಸಮಸ್ಯೆಗಳ ಪರಿಹಾರಕ್ಕಾಗಿ ಸರ್ಕಾರಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು).	ಇ–ಆಸ್ತಿ ತಂತ್ರಾಂಶದ ಮೂಲಕ ಗುರುತಿನ ಸಂಖ್ಯೆ (PID Property ID) ನೀಡಲಾಗುತ್ತಿದೆ. ಆಸ್ತಿ ತೆರಿಗೆ ಪಾವತಿ ಕ್ರಮವನ್ನು ಸರಳೀಕರಣಗೊಳಿಸಲು ಹಾಗೂ ಅವ್ಯವಹಾರಗಳನ್ನು ತಡೆಯುವ ನಿಟ್ಟಿನಲ್ಲಿ ಸ್ವಯಂಘೋಷಣೆ ಯೋಜನೆ, ಆಸ್ತಿ ತೆರಿಗೆ ಲೆಕ್ಕಾಚಾರ ತಂತ್ರಾಂಶ ಹಾಗೂ ಇ–ಸ್ವೀಕೃತಿ ಆನ್‌ಲೈನ್ ತಂತ್ರಾಶಗಳನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಆಸ್ತಿ ತೆರಿಗೆ ಪಾವತಿ ಕ್ರಮದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: ನಅಇ 93 ಜಿಇಎಲ್ 2022(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಡಾ|| ಕೆ ಗೋವಿಂದರಾಜ್ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1868ರ ಪ್ರಶ್ನೆಗೆ ಉತ್ತರಿಸುವ ಬಗ್ಗೆ [illegible]

ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ ವಿವರಗಳು (ರೂ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2018-19	2019-20	2020-21
1	ಬಾಗಲಕೋಟೆ	[illegible]	1470.32	1417.24
2	ಬಳ್ಳಾರಿ	[illegible]	3530.23	4920.27
3	ಬೆಂಗಳೂರು ನಗರ	[illegible]	1423.89	3546.04
4	ಬೆಂಗಳೂರು ಗ್ರಾಮಾಂತರ	3208.03	[illegible]	1664.87
5	ಬೆಳಗಾವಿ	5269.04	5106.85	5212.57
6	ಬೀದರ್	1114.47	1216.95	1052.61
7	ಚಾಮರಾಜನಗರ	603.01	841.97	682.73
8	ಚಿಕ್ಕಬಳ್ಳಾಪುರ	1107.06	1145.62	1144.99
9	ಚಿಕ್ಕಮಗಳೂರು	1132.74	1070.58	1331.05
10	ಚಿತ್ರದುರ್ಗ	1396.96	1545.08	1612.42
11	ದಕ್ಷಿಣ ಕನ್ನಡ	7561.29	7362.07	7570.36
12	ದಾವಣಗೆರೆ	2657.39	2642.68	3751.19
13	ಧಾರವಾಡ	[illegible]	6013.48	6577.52
14	ಗದಗ	1132.01	1003.18	1268.68
15	ಹಾಸನ	1644.81	1825.91	1987.59
16	ಹಾವೇರಿ	[illegible]	942.37	1299.58
17	ಕಲಬುರಗಿ	2736.00	[illegible]	2885.28

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	2018-19	2019-20	2020-21
18	ಕೊಡಗು	434.99	480.20	496.57
19	ಕೋಲಾರ	2031.51	2266.50	1675.53
20	ಕೊಪ್ಪಳ	935.67	1049.04	1322.81
21	ಮಂಡ್ಯ	1161.83	1381.91	1498.74
22	ಮೈಸೂರು	9548.01	9768.14	13351.26
23	ರಾಯಚೂರು	1687.30	1818.89	2134.64
24	ರಾಮನಗರ	1103.18	1292.59	1355.46
25	ಶಿವಮೊಗ್ಗ	3056.73	3392.74	3698.98
26	ತುಮಕೂರು	3470.13	3410.61	4599.08
27	ಉಡುಪಿ	1629.97	1690.72	1657.28
28	ಉತ್ತರ ಕನ್ನಡ	1242.33	1166.13	1479.80
29	ವಿಜಯಪುರ	2262.63	2373.62	2509.53
30	ಯಾದಗಿರಿ	409.79	476.48	468.28
	ಒಟ್ಟು	**71118.82**	**73677.47**	**84172.95**

Assistant Director (Development)
Directorate of Municipal
Administration
Bengaluru